ವೇತನ ಶ್ರೇಣಿಯ ಸಂಬಳ ಕೊಡುತ್ತಿರುವುದು ನಿಜವೇ? ನಿಜವಾಗಿದ್ದಲ್ಲಿ ಪಡೆಯುತ್ತಿರುವವರ ಹೆಸರುಗಳು, ಅವರ ಹುದ್ದೆ, ಹುದ್ದೆದಾರರಿಗೆ ಇರಬೇಕಾದ ಅರ್ಹತೆ ಅವರುಗಳಿಗಿರುವ ಅರ್ಹತೆಗಳ ಬಗ್ಗೆ ಸಂಪೂರ್ಣ ವಿವರ ಒದಗಿಸುವುದು;

ಆ) ಸರ್ಕಾರಿ ವೇತನ ಶ್ರೇಣಿಯ ಸಂಬಳ ಕೊಡುವುದರ ಮುಂಚೆ ಸಂಬಂಧಪಟ್ಟ ಸರ್ಕಾರಿ ಇಲಾಖೆಯ ಅನುಮತಿ ಪಡೆಯಲೇಬೇಕೆ? ಹಾಗಿದ್ದಲ್ಲಿ ಪಡೆಯಲಾಗಿದೆಯೇ? ಹೌದಾದಲ್ಲಿ ಅನುಮತಿ ಪತ್ರದ ಪ್ರತಿ ಒದಗಿಸುವುದು;

ಇ) ಕಾರ್ಖಾನೆಯ ಎಲ್ಲಾ ಕಾರ್ಮಿಕರಿಗೂ ಅವರಿಗೆ ಅನುಕೂಲವಾಗುವುದಾದರೆ, ಈ ಸೌಲಭ್ಯವನ್ನು ಸರ್ಕಾರ ಕೊಡಿಸುವುದೇ? ಹಾಗಿದ್ದಲ್ಲಿ ಯಾವಾಗ, ಇಲ್ಲವಾದಲ್ಲಿ ಕಾರಣಗಳೇನು;

ಈ) ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರದ ಅನುಮತಿ ಪಡೆಯದೇ ಸರ್ಕಾರಿ ವೇತನ ಶ್ರೇಣಿಯನ್ನು ಕೊಡುವುದು ಅಪರಾಧವೇ, ಹಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಕ್ರಮಗಳನ್ನು ತೆಗೆದುಕೊಳ್ಳಲಾಗುವುದೇ;

ಉ) ಅನುಮತಿ ಇಲ್ಲದೆ ಸೌಲಭ್ಯ ಪಡೆದಿದ್ದಲ್ಲಿ ಪಡೆದಿರುವುದರಿಂದ ಅವರುಗಳು ತೆಗೆದುಕೊಂಡಿರುವ ಹೆಚ್ಚಿನ ಹಣವನ್ನು ವಾಪಸ್ಸು ಪಡೆಯಲು ಕಾರ್ಖಾನೆಯವರಿಗೆ ಆದೇಶಿಸಲಾಗುವುದೇ?

**ಶ್ರೀ ಉಮೇಶ್ ಕತ್ತಿ (ಸಕ್ಕರೆ ಸಚಿವರು):-**

ಆ) ನಿಜವಲ್ಲ. ಆದುದರಿಂದ ಮಿಕ್ಕ ಇತರ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಆ) ಹೌದು. ಸರ್ಕಾರಿ ವೇತನ ಶ್ರೇಣಿ ನೀಡಿಲ್ಲವಾದ ಕಾರಣ ಅನುಮತಿ ಪತ್ರ ಒದಗಿಸುವ ವಿಚಾರ ಉದ್ಭವಿಸುವುದಿಲ್ಲ.

ಇ) ಇಲ್ಲ. ಆದುದರಿಂದ ಮಿಕ್ಕ ಇತರ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಈ) ಹೌದು. ಸರ್ಕಾರಿ ಶ್ರೇಣಿ ನೀಡಿಲ್ಲವಾದ ಕಾರಣ ಕ್ರಮ ಜರುಗಿಸುವ ಪ್ರಸಂಗ ಉದ್ಭವಿಸುವುದಿಲ್ಲ.

ಉ) ಸರ್ಕಾರಿ ವೇತನ ಶ್ರೇಣಿ ನೀಡಿಲ್ಲವಾದ ಕಾರಣ ತೆಗೆದುಕೊಂಡಿರುವ ಹಣ ಪಡೆಯುವ ವಿಚಾರ ಉದ್ಭವಿಸುವುದಿಲ್ಲ.

**ವಿಷಯ:- ದಾವಣಗೆರೆ ಮಾರುಕಟ್ಟೆಯ ವಾರ್ಷಿಕ ವರಮಾನ.**

1483 (2389) **ಶ್ರೀ ಎಸ್.ವಿ. ರವೀಂದ್ರನಾಥ (ಮಾಯಕೊಂಡ):-** ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ದಾವಣಗೆರೆ ಮಾರುಕಟ್ಟೆಯಲ್ಲಿ ವರ್ಷಕ್ಕೆ ಇರುವ ವರಮಾನವೆಷ್ಟು?

ಆ) ಬಂದ ಹಣವನ್ನು ಪ್ರತಿ ವರ್ಷಕ್ಕೆ ಯಾವ ಯಾವ ಬಾಬತ್ತಿಗೆ ಖರ್ಚು ಮಾಡಲಾಗಿದೆ?